# ಗರಗಸ, ಕತ್ತಿಯ ಸಮ್ಮಿಲನದಲ್ಲಿ!

ಈವರೆಗೆ 'ಮರಗಳ ಕಥೆ'ಯಲ್ಲಿ ನೀವೊಂದು ಸಂಗತಿಯನ್ನು ಗಮನಿಸಿರಲೇಬೇಕು. ಅದೇನೆಂದರೆ, ಕನ್ನಡ ಭಾಷೆಯಲ್ಲಿ ಸಮೃದ್ಧವಾಗಿರುವ ಅನ್ವರ್ಥನಾಮದ ಸೊಗಡು! ಕಡಿದಾದ ಗುಂಡಿಯನ್ನು ದಾಟಿಸುವ 'ಕಗ್ಗುಂಡಿ', ಪುತ್ರ ಜೀವೋತ್ಪತ್ತಿಗೆ ಪೂರಕ 'ಪುತ್ರಂಜೀವ', ದೇವತೆಗಳ ಪ್ರಿಯ ದಾರು (ಚೌಬೀನೆ ಮರ) 'ದೇವದಾರು', ಸಮುದ್ರದಂತೆ ಮಹಾನ್ ಔಷಧೀಯ ಗುಣವುಳ್ಳ 'ಸಮುದ್ರ ಮಹಾಫಲ', ದುರ್ವಾಸನೆಯಿಂದ ತಾರೆಯ ಹೊಳಪು ಕೂಡಿದ 'ಹೇಲ್ತಾರೆ', ಚಂದದ 'ಚಂದಾಳ'– ಹೀಗೆ ನಮ್ಮ 'ಸುಧಾ' ದಾರಿಯ ಇಕ್ಕೆಲಗಳಲ್ಲಿ ಅನ್ವರ್ಥನಾಮಗಳ ಅನೇಕ ಮರಗಳನ್ನು ನೋಡುತ್ತಾ ಪಯಣಿಸುತ್ತಿದ್ದೇವೆ.

ಈ ಸಾಲಿನಲ್ಲಿರುವ ಮತ್ತೊಂದು ಮರದ ಕಥೆಯ ನೆರಳಿನಲ್ಲಿ ನೀವೀಗ ನಿಂತಿದ್ದೀರಿ.

ಕೆಲವರ ಸ್ವಭಾವವನ್ನು ನೀವು ಗಮನಿಸಿರಬಹುದು. ದಾರಿಯಲ್ಲಿ ಓಡಾಡುವಾಗ ಕೈಗೆ ಸಿಕ್ಕಿದ ಮರಗಿಡಗಳ ಎಲೆಗಳನ್ನು ಕೀಳುತ್ತಾ, ಆ ಎಲೆಗಳೊಂದಿಗೆ ಕೊಂಚ ಹೊತ್ತು ಆಡಿ ಎಸೆದು ಮುಂದೆ ಸಾಗುತ್ತಾರೆ. ನನ್ನ ಮಗಳ ಗೆಳತಿ ರಕ್ಷಿತಾ ಇದೇ ಸ್ವಭಾವದವಳು. ನಾವು ಊರಿಗೆ ಹೋದಾಗ, ಕಾಲು ಹಾದಿಯಲ್ಲಿ ನಡೆಯುವಲ್ಲಿ, ನನ್ನ ಮಗಳು ಹಾಗೂ ಅವಳ ಗೆಳತಿ ಇಬ್ಬರೂ ಬೇಗ ಬೇಗ ಹೆಜ್ಜೆ ಹಾಕುವುದಿಲ್ಲ. ನಾವು ಬಳಸಿಕೊಂಡು ಬಂದ ಕೆಸರು ಗುಂಡಿಗಳಲ್ಲಿ ಕುಪ್ಪಳಿಸಿ ಬರುವುದು, ದಾರಿಯುದ್ದಕ್ಕೂ ಸಿಗುವ ಕಾಡು ಹೂಗಳನ್ನು ಕೊಯ್ದು ಎಲೆ ಕೊಟ್ಟೆಯಲ್ಲಿ ತುಂಬಿಕೊಳ್ಳುವುದು ಇತ್ಯಾದಿ ಕೆಲಸಗಳು ಇವರ ಹೆಜ್ಜೆಗಳನ್ನು ನಿಧಾನವಾಗಿಸಿರುತ್ತವೆ.

ಹೀಗೆ ಒಮ್ಮೆ ನಾನು ಮುಂದೆ ಹೋಗುತ್ತಿರಲು ಹಿಂದಿನಿಂದ ರಕ್ಷಿತಾ 'ಅತ್ತೆ!' ಎಂದು ನೋವಿನಲ್ಲಿ ಕೂಗಿದಳು. ಹಿಂದಿರುಗಿ ಹೋಗಿ ನೋಡಿದರೆ ಅವಳ ಕೆನ್ನೆಯಿಂದ ಸಣ್ಣದಾಗಿ ರಕ್ತ ಒಸರುತ್ತಿತ್ತು. ಹೇಗಾಯಿತು? ಎಂದು ಕೇಳಿದಾಗ ಅಲ್ಲಿದ್ದ ಮರವನ್ನು ತೋರಿಸಿ – 'ಆ ಮರದ ಎಲೆ ಕಿತ್ತು ನನ್ನ ಕೆನ್ನೆಯನ್ನು ಮೆಲ್ಲಗೆ ಸವರಲು ಹೋದೆ, ಅದು ಕೊಯ್ದು ಹೀಗಾಯ್ತತ್ತೆ' ಎಂದಳು.

ನೋಡಲು ಯಾವುದೇ ಮುಳ್ಳು ಅಥವಾ ಈಚಲು, ಕತ್ತಾಳೆಯಂತೆ ಗರಿ ಇಲ್ಲದ ಮರ ಅದು ಹೇಗೆ ಕೊಯ್ಯಲು ಸಾಧ್ಯ? ಎನ್ನಿಸಿತು. ಮರದ ಹತ್ತಿರ ಹೋಗಲು ಹಿಂಜರಿಕೆಯಾದರೂ, ನೋಡೋಣ ಎಂದು ಅವರಿಬ್ಬರಿಗೆ ಅಲ್ಲೇ ನಿಲ್ಲಲು ಹೇಳಿ ಮರದ ಬಳಿ ಹೋದೆ. ಸರಿಸುಮಾರು ನಮ್ಮ ಹಲಸಿನ ಮರದ ಎಲೆಗಳನ್ನೇ ಹೋಲುವ ಎಲೆಗಳು. ಕೊಯ್ಯುವಂತಹದ್ದೇನೂ ಮೊದಲಿಗೆ ಕಾಣಲಿಲ್ಲ. ಸೂಕ್ಷ್ಮವಾಗಿ ಗಮನಿಸಿ ನೋಡಿದಾಗ ಮಾತ್ರ ಎಲೆಗಳಲ್ಲಿ ಗರಗಸದಂಥ ಮೇಲ್ಮೈ ಕಂಡಿತು. ಎಲೆಯನ್ನು ಮುಟ್ಟಿದರೆ ಅತ್ಯಂತ ಗಡಸು. ಎಲೆ ಕಿತ್ತು ಅದರ ಅಂಚನ್ನು ಎಚ್ಚರಿಕೆಯಿಂದ ಪರಿಶೀಲಿಸಿದೆ. ಕತ್ತಿ ಎಂಬ ಉಳಿದರ್ಧ ಹೆಸರೂ ಅನುಭವಕ್ಕೆ ಬಂತು.



**ಗರಗಸವೂ, ಕತ್ತಿಯೂ ಹೊಸ ಹೊಸ ರೂಪದಲ್ಲಿ ಝಳಪಿಸುತ್ತಾ ಕಾಡು ಉರುಳಿಸುತ್ತಿದ್ದರೆ, ಇವೆರಡರ ಮಿಳಿತದಂತಿರುವ 'ಗರಗತ್ತಿ' ಮರ ಪಕ್ಷಿಗಳಿಗೆ ಹಣ್ಣು ಉಣಿಸುತ್ತಾ ಉಳಿದುಕೊಂಡಿದೆ.**

ವಿನು ಗಂಗೆ



ರಕ್ಷಿತಾಳ ಸ್ವಲ್ಪವೇ ಎಚ್ಚರಿಕೆ ಇಲ್ಲದ ಸವರುವಿಕೆಗೆ ಈ ಎಲೆ ಅವಳ ಕೆನ್ನೆಯನ್ನು ಕೊಯ್ದಿದ್ದರಲ್ಲಿ ಯಾವುದೇ ಅನುಮಾನ ಉಳಿಯಲಿಲ್ಲ. ಅವಳ ಗಾಯ ತೊಳೆಯುತ್ತಾ, ಕಂಡ ಕಂಡದ್ದನ್ನೆಲ್ಲಾ ಇನ್ನು ಮುಂದೆ ಕೀಳಬಾರದೆಂದು ಪಾಠ ಹೇಳುತ್ತಲೇ, ವಿಚಿತ್ರ ಮರದ ಇರುವಿಕೆಯ ಪಾಠ ಅವಳಿಂದ ನಾನು ಕಲಿತಿದ್ದೆ. ಆ ಮರವೇ ಮೊದಲಿಗೆ ಅನ್ವರ್ಥನಾಮದ ಪೀಠಿಕೆಯಲ್ಲಿ ಹೇಳಿದ ಗರಗತ್ತಿ! ಗರಗಸ ಮತ್ತು ಕತ್ತಿಯ ಸಮ್ಮಿಲನದಂತೆ ತೋರುವ, ಹೆಸರಿನಲ್ಲೇ ಗರಗತ್ತಿಯ ಗುಣ ಏನೆಂದು ಈಗಾಗಲೇ ನಿಮಗೆ ಅಂದಾಜಾಗಿರಬಹುದು.

Ficus Exasperata ಇದರ ವೈಜ್ಞಾನಿಕ ಹೆಸರು. ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾದ ಉಷ್ಣವಲಯದಲ್ಲಿ ಬೆಳೆಯುವ ಮರ. ಪಕ್ಷಿಗಳಿಗೆ ಬೇಕಾದಷ್ಟು ಗೋಲಿ ಗಾತ್ರದ ಹಣ್ಣು ಬಿಡುತ್ತದೆ. ಸಾಮಾನ್ಯವಾಗಿ ಹಕ್ಕಿಯ ಹಿಕ್ಕೆಯಿಂದ ಅಲ್ಲಲ್ಲಿ ಹುಟ್ಟಿರುತ್ತದೆ. ನನಗೆ ಹುಡುಕಿ ತಂದು ಬೆಳೆಸುವ ಶ್ರಮವೇನೂ ಕೊಡದೇ ನಮ್ಮ ತೋಟದಲ್ಲಿ ತಾನಾಗಿಯೇ ಸಸಿಯೊಂದು ಹುಟ್ಟಿದೆ.

ಕಸದ ರಾಶಿಗಳಿಗೆ ಕೊಡುಗೆ ನೀಡದೇ ನೈಸರ್ಗಿಕ ವಸ್ತುಗಳನ್ನು ಬಳಸಿ ಬದುಕುತ್ತಿದ್ದ ಕಾಲದಲ್ಲಿ ಗರಗತ್ತಿಯನ್ನು ಪೀಠೋಪಕರಣಗಳು, ಲೋಹದ ಹಾಗೂ ದಂತದ ವಸ್ತುಗಳಿಗೆ ಹೊಳಪು ನೀಡಲು ಬಳಸುತ್ತಿದ್ದರು. ಈಗಿನ ಮರಳು ಕಾಗದದ ಹಳೆಯ ಆವೃತ್ತಿಯಂತಿರುವುದರಿಂದ ಆಂಗ್ಲ ಭಾಷೆಯಲ್ಲಿ ಇದನ್ನು Sand Paper Tree ಎಂದು ಕರೆಯುತ್ತಾರೆ.

ಸಾಧಾರಣ ಎತ್ತರ ಬೆಳೆಯುವ ಮರವಿದು. ಅನೇಕ ಔಷಧೀಯ ಗುಣಗಳು ಅಂತರ್ಜಾಲದಲ್ಲಿ ಇವೆಯಾದರೂ ನನ್ನ ಅನುಭವಕ್ಕೆ ಬಂದಿಲ್ಲ. ಇದರ ಎಲೆಗಳಿಂದ ಈಳಿಗೆ ಮಣೆ ಇತ್ಯಾದಿ ಮರದ ಸಾಮಾನು ಉಜ್ಜಿ ತೊಳೆಯಲು ಹಾಗೂ ಉರುವಲಿಗೆ ಬಳಕೆಯಾಗುತ್ತದೆ.

ಗರಗಸವೂ, ಕತ್ತಿಯೂ ಹೊಸ ಹೊಸ ರೂಪದಲ್ಲಿ ಝಳಪಿಸುತ್ತಾ ಕಾಡು ಉರುಳಿಸುತ್ತಿದ್ದರೆ, ಗರಗತ್ತಿ ಮಾತ್ರ ಕಾಡು ಕಾಡಾಗಿಯೇ ಉಳಿಸಿದಲ್ಲಿ ಪಕ್ಷಿಗಳಿಗೆ ಹಣ್ಣು ಉಣಿಸುತ್ತಾ ಉಳಿದುಕೊಂಡಿದೆ.

ನಮ್ಮ ಪಯಣದ ಇಕ್ಕೆಲಗಳಲ್ಲಿ ತಂಪೆರೆಯುತ್ತಿರುವ ಮರಗಳು, ಕಥೆಯಲ್ಲಿ ಮಾತ್ರ ಉಳಿಯದೇ, ಪಶು ಪಕ್ಷಿಗಳಿಗೆ ನೆರಳು, ಆಸರೆ ನೀಡುವಂತೆ ಮಾಡಲು ಸಣ್ಣದಾಗಿಯಾದರೂ ಸರಿ; ನಮ್ಮೆಲ್ಲರ ಶ್ರಮವಿರಲಿ.

ಪ್ರತಿಕ್ರಿಯಿಸಿ: feedback@sudha.co.in